ಹೆಣ್ಣುಜೀವಗಳನ್ನು ಮುಕ್ತತೆಯ ಕಡೆಗೆ ಧಾವಿಸುವಂತೆ ಮಾಡಿರುವುದು ವಾಸ್ತವದ ಸಂಗತಿ. ಇದರ ಜೊತೆಯಲ್ಲಿ 'ನೈತಿಕ-ಅನೈತಿಕ' ಎಂಬ ಪರಿಭಾಷೆಗಳನ್ನು ಮೀರಿಯೂ ಬದುಕನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ. ಆದರೆ, ಇವರೆಲ್ಲಾ ಬದುಕನ್ನು ಸಂಪೂರ್ಣವಾಗಿ ಮಾಗಿಸಿಕೊಳ್ಳುವ ನಿಟ್ಟನಲ್ಲಿ ಎಡುವುತ್ತಾರೆ. ಮನಸ್ಸು ಮತ್ತು ದೇಹಗಳೇ ಮೌಲ್ಯಗಳನ್ನು ನಿರ್ಧಾರ ಮಾಡುತ್ತವೆ. ನಗರದ ವೇಗಕ್ಕೆ ಇವರ ಜೀವನದ ವೇಗ ಸಾಗುತ್ತಿದೆ ಹೊರೆತು 'ಕಾಲದ ಮತ್ತು ಮನಸ್ಸಿನ ಹಂಗನ್ನು' ಸರಿಯಾಗಿ ಅರ್ಥಮಾಡಿಕೊಳ್ಳುತ್ತಿಲ್ಲವೇನೋ? ಅಥವ ಹೀಗೂ ಹೇಳಬಹುದೇ? ವೇಗದ ಬದುಕನ್ನು ಅರ್ಥ ಮಾಡಿಕೊಳ್ಳಲು 'ತಾಯ್ತನ'ದ ಅಗತ್ಯವೇನು?. ಎಂಬ ಪ್ರಶ್ನೆಗಳು ಏಳುತ್ತವೆ. ಇವರೆಲ್ಲಾ ಅಂತರಂಗದ ಕಣ್ಣನ್ನು ಮತ್ತಷ್ಟು ಅರ್ಥಮಾಡಿಕೊಂಡರೇ, ಕಥನದ ವ್ಯಾಪಕಥೆ ಹಿಗ್ಗುತ್ತದೆ. ಈ ಬಗ್ಗೆ ಭಿನ್ನಾಭಿಪ್ರಾಯಗಳು ಇರಬಹುದು. ಆಧುನಿಕತೆ ಮತ್ತು ಜಾಗತೀಕರಣ ಮಧ್ಯಮವರ್ಗದ ಹೆಣ್ಣುಮಕ್ಕಳಿಗೆ ಬದುಕನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಸವಾಲಾಗಿವೆ. ಮೇಲಿನ ಪರಿಭಾಷೆಗಳು ಕೂಡ ಇಂದಿನ ಭಾರತೀಯ ಜೀವನದ ಸ್ಥಿತಿಯನ್ನು ಅರಿಯಲು ಪೂರ್ಣಮಟ್ಟದ ನೆರವನ್ನು ನೀಡುತ್ತಿಲ್ಲ. ಏಕೆಂದರೆ, ಒಳಗಿನ ಸಾಮಾಜಿಕ ಪಲ್ಲಟಗಳೇ ಇದಕ್ಕೆ ಕಾರಣ. ಹೊರಗಿನಿಂದ ಬಂದ ತಂತ್ರಜ್ಞಾನ ಪರಿಕರಗಳನ್ನು ಭಾರತೀಯ ಮನಸ್ಸು ಸ್ವೀಕರಿಸುವ ವಿಧಾನಗಳೇ ಬೇರೆಯಾಗಿವೆ. ಹಲವು ಬಾರಿ ಈ ಬಗೆಯ ಪರಿಕರಗಳು ಜೀವನದ ಶೈಲಿಯನ್ನೇ ಬದಲಿಸಬಲ್ಲವು. ನಿದರ್ಶನಕ್ಕೆ, ಸಾಮಾಜಿಕ ಮಾಧ್ಯಮಗಳು ಮತ್ತು ಮಾಲ್ ಸಂಸ್ಕೃತಿ. ಇವೆರಡೂ ಮನುಷ್ಯನ ಉದ್ಯೋಗಗಳನ್ನೇ ಅವಲಂಬಿಸಿವೆ. ಆದರೆ, ಗ್ರಾಮ ಜಗತ್ತನ್ನು ಅಲ್ಲಾಡಿಸಿರುವ ಬಗೆಯೇ ಬೇರೆ ತರದ್ದು. ಅಲ್ಲಿ ನೇರವಾಗಿ ಭೂಮಿ ಮತ್ತು ಬದುಕಿನ ಅಂತರಂಗವನ್ನೇ ನಡುಗಿಸಿದೆ. ಒಂದು ರೀತಿಯಲ್ಲಿ ಗ್ರಾಮ ಮತ್ತು ನಗರಗಳ ಆಂತರ್ಯವನ್ನು ಸೀಳುತ್ತಿರುವುದು ಜಾಗತೀಕರಣವೆಂಬ ಎರಡು ತಲೆಗಳ ಹಾವು. ವಲಸೆ ಎಂಬುದು ಕೂಡ ಜಾಗತೀಕರಣದ ಕೂಸು. ಈ ನಿಟ್ಟನಲ್ಲಿ ಭಾರತೀಯ ಮನಸ್ಸು ಏಕಕಾಲಕ್ಕೆ ಚಂದ್ರಮಂಡಲದ ಬಗ್ಗೆ ಯೋಚಿಸುತ್ತಿರುವಾಗಲೇ ಜಾತಿ-ಧರ್ಮಗಳ ಕ್ರೌರ್ಯದ ಬಗ್ಗೆಯೂ ಯೋಚಿಸಬೇಕಾಗುತ್ತದೆ: ಹೆಣ್ಣುಮಕ್ಕಳ ಮೇಲಿನ ನಿರ್ದಯಿ ಅತ್ಯಾಚಾರಗಳ ಕುರಿತು ಮಾತನಾಡಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಕಲಾರೂಪಗಳು ಮೇಲಿನ ವಿಚಾರಗಳಿಗೆ ತೀವ್ರವಾಗಿ ತಾಕಬೇಕಾಗುತ್ತದೆ. ಹೆಣ್ಣುಜೀವಗಳು ಇವುಗಳ ಮಧ್ಯೆ ಜೀವನಕ್ರಮವನ್ನು ರೂಪಿಸಿಕೊಳ್ಳುವುದು ಕೂಡ ಸವಾಲಿನ ಸಂಗತಿ. ಆಯ್ಕೆ, ಮುಕ್ತತೆ ಮತ್ತು ಆಧುನಿಕ ಉದ್ಯೋಗಗಳು ನಿರ್ಮಾಣ ಮಾಡುವ ಒತ್ತಡಗಳು; ಕುಟುಂಬ ನಿರ್ವಹಣೆ; ಮನೋಬಯಕೆಗಳು ಇವೆಲ್ಲವೂ ಆಕೆಯನ್ನು ಕಾಡುವ ಸಂಗತಿಗಳೇ ಆಗಿವೆ. ಈ ಬಗೆಯ ಆಶಯಗಳನ್ನು ಕಥನರೂಪಕ್ಕೆ ಇಳಿಸುವಾಗ ಬರೀ ವರದಿಯಾಗುವುದು ಇಲ್ಲವೇ ಪ್ರಸಂಗಗಳಾಗುವುದು ಸಹಜವೆನ್ನುವ ಮಟ್ಟಕ್ಕೆ ತಲುಪಿದ್ದೇವೆ. ಹಾಗಾಗಿಯೇ ಹಲವು ಬಾರಿ ಇವು ಕಥೆಗಳಾಗದೇ ಕೇವಲ ಘಟನೆಗಳಾಗಿವೆ. ಪೂರ್ಣಿಮಾ ಮಾಳಗಿಮನಿ ಅವರ ಕಥೆಗಳನ್ನು ಈ ದಿಕ್ಕಿನಲ್ಲಿ ಕಾಣಲು ಸಾಧ್ಯ. ಇವರ ಕಥೆಗಳಲ್ಲಿ ಆಧುನಿಕತೆಯನ್ನು ತೀರಾ ಹೊಸಬಗೆಯಲ್ಲಿ ಕಾಣಲು ಸಾಧ್ಯವಿಲ್ಲ; ಬದಲಿಗೆ ಜೀವನಶೈಲಿಯ ಪಲ್ಲಟಗಳನ್ನು ಮಾತ್ರ ಕಾಣಬಹುದು. ಆ ಬಗೆಯ ಪಲ್ಲಟಗಳು ಸದ್ಯದ ಆಧುನಿಕ ಪರಿಕರಗಳನ್ನು ಮತ್ತು ಉದ್ಯೋಗಗಳನ್ನು ಬಳಸಿಕೊಳ್ಳುತ್ತವೆ. ಪೂರ್ಣಿಮಾ ಅವರ ಕಥೆಗಳಲ್ಲಿ ಮಧ್ಯಮ ವರ್ಗದ ಹೆಣ್ಣುಮಕ್ಕಳ ಜೀವನಶೈಲಿಗಳಿವೆ. ಗ್ರಾಮಗಳಿಂದ ವಲಸೆ ಬಂದ ಹೆಣ್ಣುಮಕ್ಕಳು ರೆಸ್ಟೋಬಾರ್‌ನಲ್ಲಿ, ಬ್ಯೂಟಿ ಪಾರ್ಲರ್‌ನಲ್ಲಿ, ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಾರೆ. ಅನೇಕರು ಸಮಸ್ಯೆಗಳನ್ನು ಪ್ರಜ್ಞಾಪೂರ್ವಕವಾಗಿಯೇ ಒಪ್ಪಿಕೊಳ್ಳುತ್ತಾರೆ ಹೊರತು ಬದುಕನ್ನು ಮಾಗಿಸಿಕೊಳ್ಳುವುದಿಲ್ಲ. ಇಂಥ ಕಡೆ 'ಅಸಂಗತ'ವೂ ಆಗದ 'ಹತಾಶೆ'ಯಲ್ಲಿ ಬದುಕಿನ ಪ್ರೀತಿಯನ್ನು ಹುಡುಕದ ಸ್ಥಿತಿಗೆ ತಲುಪುತ್ತಾರೆ. ಮನುಷ್ಯರಲ್ಲಿ ಇರಬಹುದಾದ ಸಹಜ ಮತ್ತು ಸಂಕೀರ್ಣ ಭಾವಗಳನ್ನು ಹಿಡಿಯಲು 'ರನ್', 'ವಿನ್ನರ್ ವಿನ್ನರ್ ಚಿಕನ್ ಡಿನ್ನರ್', 'ಜೀವದಾನ' ಮುಂತಾದ ಕಥೆಗಳಲ್ಲಿ ಯತ್ನಿಸುತ್ತಾರಾದರೂ, ಭಾವಗಳಿಗೆ

